# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-10
ಚಾಸಾ-11

ದಿನಾಂಕಃ 08-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಅನಿತಾಲಕ್ಷ್ಮೀ |
| **ತಂದೆಯ / ಗಂಡನ ಹೆಸರು** | ನರಸಿಂಹಪ್ಪ |
| **ವಯಸ್ಸು** | 22 |
| **ಉದ್ಯೋಗ** | - |
| **ವಾಸಸ್ಥಳ** | ಕಡಪಲಕೆರೆ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಆರೋಪಿ ನನಗೆ ಮಾವನಾಗಬೇಕು. ಅವನ ಹೆಂಡತಿ ಹೆಸರು ಲಕ್ಷ್ಮೀ ಅವರಿಗೆ ಇಬ್ಬರು ಗಂಡು ಮಕ್ಕಳು, ಆರೋಪಿ ಮತ್ತು ಅವನ ಹೆಂಡತಿ , ಮಕ್ಕಳು ಮತ್ತು ತನ್ನ ತಾಯಿಯಾಂದಿಗೆ ಬೂದಿಬೆಟ್ಟದಲ್ಲಿ ವಾಸ ಮಾಡುತ್ತಿದ್ದರು. ಅವರಿಬ್ಬರ ನಡುವೆ ಸಂಬಂಧ ಚೆನ್ನಾಗಿತ್ತು. ನಂತರದಲ್ಲಿ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮೀ 3 ವರ್ಷದ ಹಿಂದೆ ತೀರಿಕೊಂಡಿರುತ್ತಾಳೆ. ನನ್ನ ತಾಯಿ ಆರೋಪಿ ಮತ್ತು ಆತನ ಹೆಂಡತಿ ಮಧ್ಯೆ ಗಲಾಟೆ ಆಗುತ್ತಿದೆ ಹೋಗಿ ಬರುತ್ತೇನೆ ಎಂದು ಹೇಳಿದಳು ಅದಕ್ಕೆ ನಾವು ಬರುತ್ತೇವೆ ಎಂದು ಹೇಳಿ , ನಾನು ನನ್ನ ತಾಯಿ ಆಟೋದಲ್ಲಿ ಹೋಗಿರುತ್ತೇವೆ, ನನ್ನ ತಮ್ಮ ಮತ್ತು ನನ್ನ ತಂದೆ ನಂತರದಲ್ಲಿ ಬಂದಿರುತ್ತಾರೆ. ನಾವು ಹೋಗಿ ನೋಡಿದಾಗ ಮನೆಯ ವರಂಡದ ಮುಂದೆ ಲಕ್ಷ್ಮೀ ಬಿದ್ದು ಸತ್ತುಹೋಗಿದ್ದಳು. ಆದರೆ ನಾನು ಹತ್ತಿರ ಹೋಗಿ ನೋಡಿರುವುದಿಲ್ಲ. ನನ್ನ ತಾಯಿಗೆ ನಾನು ವಿಚಾರ ಮಾಡಿದೆ ಆದರೆ ಯಾರು ಸಾಯಿಸಿರುತ್ತಾರೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಬಂದರು ಮಕ್ಕಳು ಇದ್ದರು ಆದರೆ ನನ್ನ ಮಾವ ಇರಲಿಲ್ಲ. ಆರೋಪಿ ನನ್ನ ತಾಯಿಯ ತಮ್ಮ.

ಆರೋಪಿ ತನ್ನ ಹೆಂಡತಿಯನ್ನು ಸಾಯಿಸಿರುತ್ತಾನೆ ಎಂಬ ಆರೋಪದ ಮೇಲೆ ಜೈಲಿನಲ್ಲಿರುತ್ತಾನೆ, ಆದರೆ ಆತನು ಸಾಯಿಸಿರುವುದಿಲ್ಲ ಯಾರು ಸಾಯಿಸಿರುತ್ತಾರೆಂದು ಗೊತ್ತಿಲ್ಲ. ಲಕ್ಷ್ಮೀ ರವರ ಗುಣ , ನಡತೆ ಚೆನ್ನಾಗಿತ್ತು. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ನನ್ನ ಅತ್ತೆ ಸಾವಿನ ಬಗ್ಗೆ ನನಗೆ ಯಾವುದೇ ಅನುಮಾನ ಇರುವುದಿಲ್ಲ. ಶವದ ಹತ್ತಿರ ಯಾವುದೇ ವಸ್ತುವನ್ನು ನೋಡಿರುವುದಿಲ್ಲ , ರಕ್ತ ಮಾತ್ರ ನೋಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ಕೊಲೆ ಆಗುವ 5-6 ತಿಂಗಳ ಹಿಂದಿನಿಂದ ಲಕ್ಷ್ಮೀ ಯಾರೋ ಜೊತೆ ಪೋನಿನಲ್ಲಿ ಮಾತನಾಡುತ್ತಿರುತ್ತಾಳೆಂದು ಆರೋಪಿ ನನ್ನ ಅತ್ತೆ ಮೇಲೆ ಅನುಮಾನ ಪಟ್ಟು ಆಗಾಗ ಅವಳೊಂದಿಗೆ ಜಗಳವಾಡುತ್ತಿದ್ದ ,ಆದ್ದರಿಂದ ನನ್ನ ತಂದೆ ತಾಯಿ ಹೋಗಿ ಪಂಚಾಯಿತಿ ಮಾಡಿ ಬುದ್ದಿ ಹೇಳಿದ್ದರು ಎಂದರೆ ಸರಿಯಲ್ಲ. ದಿ. 15.08.2023 ರಂದು ರಾತ್ರಿ 10-45 ಗಂಟೆಗೆ ಬೂದಿಬೆಟ್ಟದ ಶ್ರೀದೇವಿ ಫೋನ್ ಮಾಡಿ ನನ್ನ ತಾಯಿಗೆ ರಾಮಾಂಜಿ ಲಕ್ಷ್ಮೀ ಮೇಲೆ ಜಗಳ ಮಾಡಿ ಮನೆ ಮುಂದೆ ಒಣಕೆಯಲ್ಲಿ ತಲೆಗೆ ಹೊಡೆದಿದ್ದಾನೆ ರಕ್ತ ಬರುತ್ತಿದೆ ಬೇಗ ಬನ್ನಿ ಎಂದು ತಿಳಿಸಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ನಾವು ಹೋಗಿ ನೋಡಿದಾಗ ಶವದ ಹತ್ತಿರ ಮುರಿದಿರುವ ಒಣಕೆ ಬಿದ್ದಿದ್ದತ್ತು , ತಲೆಗೆ ಮತ್ತು ಬಲಕಿವಿ ಬಳಿ ಗಾಯಗಳಾಗಿ ರಕ್ತ ಹರಿದಿತ್ತು ಎಂದರೆ ಸರಿಯಲ್ಲ. ನನ್ನ ಮಾವ ಅನುಮಾಪಟ್ಟು ಒಣಕೆಯಿಂದ ಹೊಡೆದಿರುತ್ತಾನೆ ಲಕ್ಷ್ಮೀ ಸಾವಿಗೆ ನನ್ನ ಮಾವನೇ ಕಾರಣ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-14 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**